86 (6)

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜು, ಇವರ ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ

******

**ಸೂಚನೆ:-**

ಕೋಲಾರ ನಗರದ ಅಂತರಗಂಗೆ ಮುಖ್ಯ ರಸ್ತೆಯಲ್ಲಿನ ನೂತನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡವು ಸುಮಾರು 60 ವರ್ಷಗಳ ಹಳೆಯ ಕಟ್ಟಡವಾಗಿದ್ದು, ಇದು ಶಿಥಿಲಾವಸ್ಥೆಯಲ್ಲಿದ್ದು, ಈ ಕಟ್ಟಡದ 8 ಕೊಠಡಿಗಳನ್ನು ಕೆಡವಿ ಹೊಸ 6 ಕೊಠಡಿಗಳನ್ನು ನಿರ್ಮಾಣ ಮಾಡಲು ರೂ.1.00 ಕೋಟಿ ಅನುದಾನವನ್ನು 2021-22ನೇ ಸಾಲಿನ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆ ಮಾಡುವಂತೆ ದಿನಾಂಕ:02/11/2022 ರಂದು ಕಾರ್ಯದರ್ಶಿಗಳು, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಚಿತ್ರದುರ್ಗ ರವರಿಗೆ ಪತ್ರ ಬರೆದಿದ್ದ ಮೇರೆಗೆ ಉಲ್ಲೇಖದ ಕಾರ್ಯದರ್ಶಿಗಳು, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಚಿತ್ರದುರ್ಗ ರವರ ಆದೇಶದಂತೆ ಸದರಿ ಕಾಮಗಾರಿಯನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ಇಂಜಿನಿಯರಿಂಗ್, ವಿಭಾಗ, ಕೋಲಾರ ರವರಿಂದ ಕೈಗೊಳ್ಳಲು ರೂ.100.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಕಾಮಗಾರಿಯ ಅಂದಾಜು ಮೊತ್ತದ ಪೈಕಿ ಶೇ.40 ರಷ್ಟು ರೂ.40.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ, ಕಾಮಗಾರಿಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ. ಆದರೆ, ಪ್ರಸ್ತುತ ದಿನದವರೆಗೆ ಈ ಅನುದಾನದ ಮೊತ್ತವು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ ರವರ ಖಾತೆಗೆ ಜಮೆಯಾಗಿರುವುದಿಲ್ಲ. ಈ ಶಾಲೆಯು ಇಂದಿಗೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ನೀಡುತ್ತಿರುವ ಹಿನ್ನಲೆಯಲ್ಲಿ ಈ ಶಾಲಾ ಕಟ್ಟಡವನ್ನು ಪುನಃಶ್ಚೇತನಗೊಳಿಸಿ ಮಾದರಿ ಶಾಲೆಯನ್ನಾಗಿಸಬೇಕಾಗಿರುತ್ತದೆ. ಅಲ್ಲದೇ, ನಾನು ಸಹಾ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಸದಸ್ಯನಾಗಿದ್ದು ಕಳೆದ 2022-23 ಹಾಗೂ 2023-24ನೇ ಸಾಲಿನಲ್ಲಿ ಯಾವುದೇ ಅನುದಾನವನ್ನು ನನ್ನ ಕ್ಷೇತ್ರ ಅಭಿವೃದ್ಧಿಗೆ ಬಿಡುಗಡೆ ಮಾಡಿರುವುದಿಲ್ಲವುದರಿಂದ ಈ ವಿಷಯವನ್ನು ಮಾನ್ಯ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**ಉತ್ತರ:-**

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 2022-23ನೇ ಸಾಲಿನಲ್ಲಿ 99 ವಿಧಾನ ಸಭೆ/ವಿಧಾನ ಪರಿಷತ್ ಶಾಸಕರುಗಳಿಗೆ ಆಯವ್ಯಯದಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಗಳಂತೆ ರೂ.99.00ಕೋಟಿಗಳನ್ನು ನಿಗದಿಪಡಿಸಲಾಗಿರುತ್ತದೆ. ಅದರಂತೆ ಪ್ರತಿ ಕ್ಷೇತ್ರಕ್ಕೆ ರೂ.1.00ಕೋಟಿಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಲು ಸರ್ಕಾರವು ಅನುಮೋದನೆ ನೀಡಿರುತ್ತದೆ. ಆದರೆ, ಮಂಡಳಿಯ ಕಾರ್ಯದರ್ಶಿಗಳು ಮಂಡಳಿ ಹಂತದಲ್ಲಿ ನಿರ್ಣಯ ಕೈಗೊಂಡು 1:3 ಅನುಪಾತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರವು ಮಂಜೂರಾತಿ ನೀಡಿರುವುದಿಲ್ಲ. ಆದರೆ, ಮಂಡಳಿಯ ಕಾರ್ಯದರ್ಶಿಗಳು ಸರ್ಕಾರದ ಅನುಮೋದನೆ ಇಲ್ಲದೇ ಹಲವು ಕ್ಷೇತ್ರಗಳಿಗೆ ರೂ.1.00ಕೋಟಿಗಳಿಗಿಂತ ಹೆಚ್ಚಿನ ಮೊತ್ತಕ್ಕೆ ಮಂಜೂರಾತಿ ನೀಡಿರುತ್ತಾರೆ.

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗೋವಿಂದರಾಜುರವರಿಗೆ 2022-23ನೇ ಸಾಲಿನಲ್ಲಿ ರೂ.1.00ಕೋಟಿಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಲು ಅವಕಾಶವಿದ್ದರೂ, ಇವರು ರೂ.3.00ಕೋಟಿ ಕಾಮಗಾರಿಗಳ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿದ್ದು, ಮಂಡಳಿಯ ಕಾರ್ಯದರ್ಶಿರವರು ರೂ.1.00ಕೋಟಿಗೆ ಮಂಜೂರಾತಿ ನೀಡುವ ಬದಲು ರೂ. 2.00ಕೋಟಿಗಳಿಗೆ ಮಂಜೂರಾತಿ ನೀಡಿದ್ದು, ಭಾಗಶಃ ಅನುದಾನ ರೂ.40.00ಲಕ್ಷಗಳನ್ನು ಬೇರೆ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುತ್ತಾರೆ.

ಅಲ್ಲದೇ ಮಾನ್ಯ ಶಾಸಕರು ಪ್ರಸ್ತಾಪಿಸಿರುವ ಕೋಲಾರ ಸರ್ಕಾರಿ ಪ್ರೌಢ ಶಾಲೆಯ ಕೊಠಡಿಗಳ ನಿರ್ಮಾಣ ಕಾಮಗಾರಿಯು ಸರ್ಕಾರದಿಂದ ಅನುಮೋದನೆಯಾದ ಕ್ರಿಯಾಯೋಜನೆಯಲ್ಲಿ ಸೇರ್ಪಡೆಯಾಗದೇ ಇದ್ದರೂ ಮಂಡಳಿಯ ಕಾರ್ಯದರ್ಶಿಗಳು ಹೆಚ್ಚುವರಿಯಾಗಿ ಮತ್ತೆ ರೂ.1.00ಕೋಟಿಗಳ ಕಾಮಗಾರಿಗಳಿಗೆ ಅನುಮೋದನೆ ನೀಡಿರುತ್ತಾರೆ. ಆದರೆ, ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಮಂಡಳಿಯ ಕಾರ್ಯದರ್ಶಿ ಹೆಚ್ಚುವರಿಯಾಗಿ ಮಂಜೂರಾತಿ ನೀಡಿದ್ದ ಸುಮಾರು ರೂ.374.00ಕೋಟಿಗಳ ಕಾಮಗಾರಿಗಳಲ್ಲಿ ರೂ. 224.00ಕೋಟಿಗಳ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗದ ಕಾರಣದಿಂದ ಪ್ರಾರಂಭವಾಗಿರುವುದಿಲ್ಲ. ಆದ್ದರಿಂದ ಪರಿಶೀಲನೆ ನಡೆಸಿ ಅಂತಹ 2274 ಕಾಮಗಾರಿಗಳನ್ನು ರದ್ದುಪಡಿಸಲಾಗಿದೆ. ರದ್ದುಪಡಿಸಿರುವ ಕಾಮಗಾರಿಗಳ ಪಟ್ಟಿಯಲ್ಲಿ ಮಾನ್ಯ ಗೋವಿಂದರಾಜುರವರು ಪ್ರಸ್ತಾಪಿಸಿರುವ ಕೋಲಾರ ಸರ್ಕಾರಿ ಪ್ರೌಢ ಶಾಲೆಯ ಕೊಠಡಿಗಳ ನಿರ್ಮಾಣ ಕಾಮಗಾರಿಯು ಸೇರ್ಪಡೆಗೊಂಡಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಗೆ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ.

2023-24ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಪ್ರತಿ ಕ್ಷೇತ್ರಕ್ಕೆ ರೂ.35.00ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, 2024-25ನೇ ಸಾಲಿನಲ್ಲೂ ಸಹ ರೂ.35.00ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಮಾನ್ಯ ವಿಧಾನ ಪರಿಷತ್ ಸದಸ್ಯರು ಈಗಾಗಲೇ ಹೆಚ್ಚುವರಿಯಾಗಿ ರೂ.1.00ಕೋಟಿಗಳ ಕಾಮಗಾರಿಗಳಿಗೆ ಮಂಜೂರಾತಿ ಪಡೆದಿರುವುದರಿಂದ ಉಳಿದ ಅನುದಾನವನ್ನು ತಮ್ಮ ಕ್ಷೇತ್ರಕ್ಕೆ ಲಭ್ಯವಾಗುವ ಅನುದಾನದಲ್ಲಿ ಮುಂದುವರಿದ ಕಾಮಗಾರಿಗಳಾಗಿ ಕ್ರಿಯಾಯೋಜನೆಯಲ್ಲಿ ಸೇರಿಸಿ ಅನುಷ್ಠಾನಗೊಳಿಸಬಹುದಾಗಿದೆ ಹಾಗೂ ಪ್ರಗತಿ ಆಧರಿಸಿ ಅನುದಾನ ಬಿಡುಗಡೆ ಮಾಡಲಾಗುವುದು ಎಂಬ ಅಂಶವನ್ನು ಮಾನ್ಯ ಸದಸ್ಯರಿಗೆ ಈ ಮೂಲಕ ಮಾಹಿತಿ ನೀಡಲು ಬಯಸುತ್ತೇನೆ.

(ಸಂಖ್ಯೆ: ಪಿಡಿಎಸ್ 51 ಪಿಟಿಪಿ 2024)

**(ಡಿ.ಸುಧಾಕರ್)**
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.